ಅಪ್ರಿಸಿಯೇಟ್ ಪಂಪ.

◆ **ಕನ್ನಡಿಗರು ಜೀವನದಲ್ಲೇ ಉಚ್ಚಾರಣೆ ಮಾಡೋದಿಲ್ಲ. ಭಾಷೆಯನ್ನ ಆಡುವ ಹಾಗೆ ಬರೀಬೇಕು ಅನ್ನೋದು ಅವರ ವಾದ.**

ಹೌದು, ಆದರೆ ಕೆಲವು ಸರ್ತಿ ಮಾತಾಡೋ ಹಾಗೆ ಬರೆಯೋ ಅಗತ್ಯವಿಲ್ಲ. ಆಡುವ ಹಾಗೆ ಬರೀದೇ ಇದ್ರೆ ತಪ್ಪಿಲ್ಲ. ಇಲ್ಲಿ ಆ ಕಾಲದಲ್ಲಿ ಜನಗಳಿಗೆ ಯಾವುದು ವ್ಯವಹಾರ ಇತ್ತು ಅದನ್ನೂ ತಿಳ್ಕೋಬೇಕು. ನಾನು 'ಮಹಾಭಾರತ' ಅಂತಲೇ ಹೇಳ್ತೀನಿ. 'ಮಹಾಬಾರತ' ಅನ್ನಲ್ಲ.

◆ **ಕನ್ನಡ ಸಾಹಿತ್ಯದಲ್ಲಿ ಆಹಾರ ಸಂಸ್ಕೃತಿಯ ವಿವರಗಳಿಲ್ಲ ಅಂತ ಹೇಳುತಿರ್ತೀರಿ. ಆಹಾರದ ಬಗ್ಗೆ ಯಾಕಷ್ಟು ಕುತೂಹಲ?**

ನಾನು ಜೀವನ ಪೂರ್ತಿ ಅಡುಗೆ ಮಾಡಿದೀನಿ ಸ್ವಾಮಿ. ನಮ್ಮ ಲೈಫಲ್ಲಿ ಮೇಜರ್, ಸೆಕ್ಸ್ ಅಂಡ್ ಫುಡ್ ಅಲ್ವಾ? ಕನ್ನಡದಲ್ಲಿ ಫುಡ್ ಕಲ್ಚರ್ ಬಗ್ಗೆ ತುಂಬ ಡಿಟೈಲಾಗಿ ನಮ್ಮ ಲೇಖಕರು ಬರೆಯೋದಿಲ್ಲ. ಕುವೆಂಪು ಈಜ್ ಗುಡ್ ಇನ್ ಹಿಸ್ ನಾವೆಲ್ಸ್. ಆದರೆ ಶೂದ್ರ ಲೇಖಕರಲ್ಲಿಯೂ ಬರವಣಿಗೆಯಲ್ಲಿ ಅವರ ಆಹಾರಲೋಕ ಬರೋಲ್ಲ. ಅವರಿಗೆಲ್ಲ ಮೇಲ್ಜಾತಿ ಹಿಂದೂಗಳೇ ಮಾದರಿಗಳಾಗಿದ್ದರು.

◆ **ಕರ್ನಾಟಕದಲ್ಲಿ ಆಹಾರದ ಮೇಲೆ ಹಲ್ಲೆಗಳು ಆರಂಭವಾಗಿವೆ.**

ಈಗ ಅಸ್ಸಾಂನಲ್ಲಿ ಬ್ರಾಹ್ಮಣರ ಮನೆಗೆ ಹೋದರೆ ಮಾಂಸದ ಸಾರು. ಈಗಲೂ ನೀವು ಕೊಲ್ಕೊತ್ತಕ್ಕೆ ಹೋದರೆ ರಾಮಕೃಷ್ಣಾಶ್ರಮದ ಗೆಸ್ಟ್ ಹೌಸ್‌ನಲ್ಲಿ ಬಹಳ ಒಳ್ಳೆಯ ಮಾಂಸಾಹಾರ ಕೊಡುತ್ತಾರೆ. ದೆ ಆರ್ ಬ್ರಾಹ್ಮಿನ್ಸ್ ಗಾಡ್‌ಸೇಕ್. ಸಾಂಸ್ಕೃತಿಕ ಬಂಗಾಳದ ಮಾಂಸಾಹಾರದ ಕಲ್ಪನೆಯನ್ನು ನಮ್ಮ ಲೇಖಕರು ಪಡೆಯಲಿಲ್ಲ. ಕೆ.ಟಿ. ಆಚಯ್ಯ ಅಂತ ಕೂರ್ಗಿ ಅವರು. ಇಂಡಿಯನ್ ಫುಡ್ ಮೇಲೆ ಒಳ್ಳೇ ಪುಸ್ತಕ ಬರೆದಿದಾರೆ. ಡಿಕ್ಷನರಿ ಮಾಡಿದಾರೆ.

◆ **ಟಿಪ್ಪು ಇತಿಹಾಸದ ಬಗ್ಗೆ ಕನ್ನಡದಲ್ಲಿ ಪರ ವಿರೋಧ ಚರ್ಚೆಯಾಗ್ತಿದೆ...**

ಅಯ್ಯೊ ನನ್ನಪ್ಪಾ. ಟಿಪ್ಪು ಯುದ್ಧದಲ್ಲಿ ಕ್ರೌರ್ಯ ಮಾಡಿದ ಅಂತ. ಯಾವ ರಾಜ ಕ್ರೌರ್ಯವಿಲ್ಲದೆ ಯುದ್ಧ ಮಾಡಿದಾನೆ? ಪ್ರೊಗ್ರೆಸಿವ್ ಇತಿಹಾಸಕಾರರನ್ನು ನಾನು ಒಪ್ಪಲ್ಲ. ಅವರು ಒಂದು ತರಹ ಕ್ರಾಸ್‌ಓವರ್ ಮಾಡ್ತಾರೆ. ಟಿಪ್ಪು ವಾಸ್ ಎ ಫ್ಯೂಡಲ್ ಕಿಂಗ್ ಇನ್ ದಿ ಕಾಂಟೆಕ್ಸ್ಟ್ ಆಫ್ ಎಯ್ಟೀನ್ತ್ ಸೆಂಚುರಿ. ಜನ ದಕ್ಷರನ್ನು ಇಷ್ಟಪಡ್ತಾರೆ. ಮೈಸೂರು ರಾಜ ದುರ್ಬಲನಾಗಿದ್ದ. ಹೈದರ್ ಆಡಳಿತಕ್ಕೆ ಒಂದು ಸ್ಟೆಬಿಲಿಟಿ ಕೊಟ್ಟ. ಟಿಪ್ಪು ಬ್ರಾಟ್ ಮೆನಿ ನ್ಯೂಥಿಂಗ್ಸ್ ಟು ಮೈಸೂರ್. ಹೊಸ ಟೆಕ್ನಾಲಜಿ ತಂದ. 'ಅವನು ಕನ್ನಡ ಕಿಂಗ್' ಅಂತ ಗಿರೀಶ್ ಬರೀತಾರೆ. ನಮ್ಮ ಈಗಿನ ಕಲ್ಪನೆಯ ಕನ್ನಡ ರಾಷ್ಟ್ರೀಯತೆಯನ್ನು 18ನೇ ಶತಮಾನದಲ್ಲಿಟ್ಟು ನೋಡಲು ಸಾಧ್ಯವಿಲ್ಲ. ಅವನು ಮೈಸೂರು ಕಿಂಗ್ ಅಷ್ಟೆ.

◆ **ಯಾಕೆ ಮೇಷ್ಟ್ರು ಕೆಲಸ ಬಿಟ್ಟು ಪತ್ರಿಕೆಗೆ ಹೋದಿರಿ?**

ಎಷ್ಟು ಪಾಠ ಮಾಡದಪ್ಪಾ? ಸಾಕಾಯಿತು. ಆಕ್ಚುವಲೀ ಒಂದು ಪುಸ್ತಕ ಬರೆದಿದ್ದೀನಿ – 'ಎಜ್ಯುಕೇಶನ್ ಆಫ್ ದೆನ್ ಇಂಗ್ಲಿಷ್ ಟೀಚರ್' ಅಂತ. ಐ ಡೋಂಟ್ ಫೀಲ್ ಇಟ್ ವಾಜ್ ಎ ವೇಸ್ಟ್. 1975, ಎಮರ್ಜನ್ಸಿ. ಏನು ಮಾಡಬೇಕಂತ ಗೊತ್ತಿಲ್ಲ. ಐ ವೆಂಟು ಟು ಬಾಂಬೆ. ಆಮೇಲೆ ಹಿಂದೂ ಪತ್ರಿಕೆಯಿಂದ ಅಸ್ಸಾಮಿಗೆ ಹೋಗೋಕೆ ಆಫರ್ ಸಿಕ್ತು. ಜನ ಅಂದುಕೊಳ್ತಾರೆ, ನಾನು ಮದ್ರಾಸಿ ಅಂತ. ಇಪಿಡಬ್ಲ್ಯು ಎಡಿಟರ್ ಕೃಷ್ಣರಾಜ್ ನನ್ನ ಸ್ನೇಹಿತ, ಅದಕ್ಕೆ ಸಿಕ್ಕಿತು ಅಂತ. ಸ್ವಾಮಿ, ನಿಮ್ಮ ಕರ್ನಾಟಕದಲ್ಲಿ ನಾನು ಬರೀ ಎಂಟು ವರ್ಷದ ಪರಿಚಯ. ಆದರೆ ಅಸ್ಸಾಂನಲ್ಲಿ ಜೀವನಾನೇ ಕಳೆದೆ. ಮೊದಲಿಂದಲೂ ಅಸ್ಸಾಂ ಬಗ್ಗೆ ಬರೀತಿದ್ದೆ.

◆ **ಮಂಡೇಲಾ ಅವರ ಸಂದರ್ಶನ ಮಾಡಿದಿರಿ. ಭೇಟಿಯ ಸನ್ನಿವೇಶ ಹೇಗಿತ್ತು?**

1994 ನವೆಂಬರ್, ಬೆಳಿಗ್ಗೆ 8.30ಕ್ಕೆ ಸಂದರ್ಶನ ಫಿಕ್ಸ್ ಆಗಿತ್ತು. ಮಂಡೇಲಾರನ್ನು ಜನ ಪ್ರೀತಿಯಿಂದ ಗೌರವದಿಂದ ಮಡಿಬಾ ಅಂತ ಕರೀತಾರೆ. ಸೆಕ್ರೆಟರಿ ಬಂದು ಹೇಳಿದ, 'ಮಡಿಬಾ ಅವರಿಗೆ ಇವತ್ತು